ಶ್ರೀ ಎಂ. ಎಸ್. ಕೃಷ್ಣನ್.—ಒಳಗಿಂದೊಳಗೆ ಮಾಡುವುದು ಬೇಡ, ಬಹಿರಂಗವಾಗಿ ನಡೆಯಲಿ. ಮಂತ್ರಿಗಳು ಶಾಸಕರನ್ನು ಕಡಗಣಿಸಿದಾಗ ಅವರ ಕಾರ್ಯಕ್ರಮವನ್ನು ವಿರೋಧ ಮಾಡಲೇಬೇಕಾಗುತ್ತದೆ. ಮಾನ್ಯ ರಾಚಯ್ಯನವರ ಮಾತನ್ನು ನಾನು ಒಪ್ಪುತ್ತೇನೆ. ಅವರ ಮಾತು ಸಮಂಜಸವಾಗಿದೆ.

ಮನವಿಗಳನ್ನು ಒಪ್ಪಿಸುವುದು

Sri Malharagowda S. Patil.—Sir, I beg to present the following Petitions regarding :

a) Construction of Tank at Ammanagi village near Kurubara Kodi in Nidasosi Halla, Belguam District.

b) Construction of Lift Irrigation Scheme on the Ghataprabha river near Salemwadi, Belgaum District.

c) Improvement and widening of Roads and Bridges commencing from National Highway No. 4 near Sankeshwar through Gadahinglaja upto Maharastra border.

Mr. Speaker.—Petitions presented.

ಗಮನ ಸೆಳೆಯುವ ಸೂಚನೆಗಳು

ವಿಷಯ : ಗಂಗಾವತಿ ಠಾಣೆಯಲ್ಲಿ ಪೋಲೀಸರ ಕಿರುಕುಳದಿಂದ ಪೀರ್ ಮಹಮದ್ ಎಂಬವರು ತೀರಿಕೊಂಡಿರುವ ಬಗ್ಗೆ.

ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೆ, ಜೂನ್ 25ರಂದು ಕನ್ನಡ ಪ್ರಭ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಗಂಗಾವತಿ ಪೋಲೀಸ್ ಠಾಣೆಯಲ್ಲಿ ಪೀರ್ ಮಹಮದ್ ಎಂಬ ಯುವಕನನ್ನು ಆತಿಥ್ಯ ಮಾಡಿದ ಪ್ರಕರಣ ಹೊರಬಂದಿದೆ. ಜುಲೈ 13ರಂದು ಆತ ವಿಕ್ಟೋರಿಯ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾನೆ. ಆ ಬಗ್ಗೆ ಗೃಹಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡಬಯಸುತ್ತೇನೆ.

ರಾಯಚೂರು ಜಿಲ್ಲೆಯ ಗಂಗಾವತಿಯ ಪಿಂಜಾರು ಓಣಿಯಲ್ಲಿ 85 ವರ್ಷದ ಮೌಲಾನಸಾಬ್ ಎಂಬುವರು ಒಬ್ಬರೇ ಬೇರೆ ವಾಸವಾಗಿದ್ದರು. ಈತನ ಅಣ್ಣತಮ್ಮಂದಿರು ಬೇರೆಬೇರೆ ವಾಸವಾಗಿದ್ದು ಈತನ ಸಣ್ಣ ತಮ್ಮ ಶಮಿದ್‌ಸಾಬ್‌ನ ಎಂಟು ಹತ್ತು ವರ್ಷದ ಮಗಳು ರಜಮಾ ಎಂಬುವಳು ಪ್ರತಿನಿತ್ಯ ಊಟ ತೆಗೆದುಕೊಂಡು ಹೋಗಿ ಕೊಡುತ್ತಿದ್ದಳು. ಅದರಂತೆ ದಿನಾಂಕ 29-4-85ರಂದು ಬೆಳಿಗ್ಗೆ ಸದರಿ ರಜಮಾ ಎಂಬುವಳು ತನ್ನ ತಾತನಿಗೆ ಊಟ ತೆಗೆದುಕೊಂಡು ಹೋಗಿ ಮನೆ ಹೊರಗಿನ ಬಾಗಿಲಿಗೆ ಬೀಗ ಹಾಕಿದ್ದನ್ನು ಕಂಡು ತಾತನು ಯಾವುದಾದರೂ ಊರಿಗೆ ಹೋಗಿರಬಹುದೆಂದು ಭಾವಿಸಿ ಮನೆಗೆ ವಾಪಸ್ಸು ಬಂದಳು. ಇದೇರೀತಿ 2-5-85ರವರೆಗೂ ಪ್ರತಿನಿತ್ಯ ಊಟ ತೆಗೆದುಕೊಂಡು ಹೋಗಿ ವಾಪಸ್ಸು ಬರುತ್ತಿದ್ದಳು. ಆದೇದಿನ ಮೌಲಾನಸಾಬ್‌ನ ಪುತ್ರ ದೊಡ್ಡ ಶಮಿದ್‌ಸಾಬ್ ಸದರಿ ಮನೆಯಿಂದ ದುರ್ವಾಸನೆ ಬರುತ್ತಿರುವುದನ್ನು ತಿಳಿದು ಗಂಗಾವತಿ ನಗರ ಪೋಲೀಸ್ ಠಾಣೆಗೆ ಹೋಗಿ ಅಲ್ಲಿ ಕರ್ತವ್ಯದ ಮೇಲಿದ್ದ ಆರಕ್ಷಕ ಉಪ ನಿರೀಕ್ಷಕರಿಗೆ ವರದಿ ಮಾಡಲು ಅದರ ಆಧಾರದ ಮೇಲೆ ಯುಡಿ ಆರ್‌ನಂ. 3:85 ಕಲಂ 174ರ ಪ್ರಕಾರ ಪ್ರ ದಂ ಸಂ ಮೊಕದ್ದಮೆ ದಾಖಲು ಮಾಡಿಕೊಂಡು ಸದರಿ ಮನೆಯ ಹತ್ತಿರ ಹೋಗಿ ಪಂಚರ ಸಮಕ್ಷಮ ಹೊರಬಾಗಿಲಿಗೆ ಹಾಕಿದ್ದ ಬೀಗವನ್ನು ತೆಗೆಯಿಸಿ ಒಳಗೆ ಪ್ರವೇಶಿಸಿ ನೋಡಲು ಮುದುಕ ಮೌಲಾನಸಾಬ್‌ನ ಹೆಣವು ಹಾಸಿಗೆ ಮೇಲೆ ಅಂಗಾತ ಬಿದ್ದಿದ್ದು ಕಂಡು ಬಂತು. ಆರಕ್ಷಕ ಉಪನಿರೀಕ್ಷಕರು ಶವದ ಪಂಚನಾಮೆ ಮಾಡುವಾಗ ಗಾಯಗಳು ಕಂಡುಬಂದಿರುವುದಿಲ್ಲ. ಈ ಮುದುಕನ ಸಾವಿನ ಬಗ್ಗೆ ಅವರ ರಕ್ತ ಸಂಬಂಧಿಕರಾಗಲೀ ಅಥವಾ ಅಜುಬಾಜು ವಾಸವಿರುವ ಜನರಾಗಲೀ ಯಾವ ತರಹದ ಅನುಮಾನವನ್ನೂ ವ್ಯಕ್ತಪಡಿಸಲಿಲ್ಲ, ಶವಪರೀಕ್ಷೆಯನ್ನು ಆಲ್ಲೇ ನಡೆಸಿದ ಗಂಗಾವತಿಯ ಸರ್ಕಾರಿ ವೈದ್ಯರು ಹೆಣವು ಕೊಳೆತಿರುವುದರಿಂದ ಸಾವಿನ ಬಗ್ಗೆ ಖಚಿತವಾದ ಅಭಿಪ್ರಾಯ ಕೊಡುವುದಕ್ಕಾಗುವುದಿಲ್ಲವೆಂದು ತಿಳಿಸಿರುತ್ತಾರೆ, ಆದರೂ ಮನೆಯ ಹೊರಗಿನ ಬಾಗಿಲಿಗ ಯಾರು ಬೀಗ ಹಾಕಿದರು ಎಂಬ ಬಗ್ಗೆ ತನಿಖೆ ಮುಂದುವಿರೆಸಿದಾಗ, ಆ ಓಣಿಯ ಜನರಿಂದ, ಚಿತ್ತವಾಡಗಿ ಹೊಸ ಪೇಟೆಯ ಮಹಬೂಬ್‌ನ ಮಗ ಪೀರ್ ಮಹಮದ್ ಎಂಬ ಹುಡುಗ ಬರುತ್ತಿದ್ದು, ಮೃತನ ಮೊಮ್ಮಗ